**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 349 /2019**

ಚಾ.ಸಾ–1, ಪ್ರಾ.ಸಾ–01

| | | |
|---|---|---|
| ಹೆಸರು | : | ಕವಿತ |
| ಗಂಡನ ಹೆಸರು | : | ಲಿಂಗರಾಜು |
| ವಯಸ್ಸು | : | 34 |
| ವೃತ್ತಿ | : | ಗೃಹಿಣಿ |
| ವಾಸ | : | ಕಿರಗಾವಲು |

**ದಿನಾಂಕ 12.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

ಚಾಸಾ 2 ನನ್ನ ಗಂಡ, ಚಾಸಾ 3 ನನ್ನ ತಂದೆ. ಚಾಸಾ 4 ರಿಂದ 9 ಪರಿಚಯವಿದೆ. ಆರೋಪಿತರ ಪರಿಚಯವಿದೆ. ದಿಃ 03.02.2019 ರಲ್ಲಿ ನಾನು ಮತ್ತು ಚಾಸಾ 2 ನನ್ನ ತಾಯಿಯನ್ನು ನೋಡಲು ಸಂಜೆ 5 ಗಂಟೆಗೆ ನಮ್ಮ ತಾಯಿ ಮನೆಗೆ ಬಂದಿದ್ದೆವು. ನಾವು ಮನೆಯಲ್ಲಿ ಮಾತನಾಡುತ್ತಾ ಕುಳಿತಾಗ ಆರೋಪಿತರು ನಮ್ಮ ಬಗ್ಗೆ ಮಾತನಾಡುತ್ತಿದ್ದೀರಿ ಅಂತ ಜಗಳಕ್ಕೆ ಬಂದರು. ಆರೋಪಿತರು ನನ್ನನ್ನು ಒಡೆದರು. ದಿಃ 05.02.2019 ರಂದು ನಾನು ಚಾಸಾ 2 ಮತ್ತು 3 ಆಟೋದಲ್ಲಿ ಆಸ್ಪತ್ರೆಗೆ ಹೋಗುತ್ತಿದ್ದಾಗ ಬೆಳಗ್ಗೆ 10 ಗಂಟೆಗೆ ಹಿರಿಯೂರಿಂದ ನರಸೀಪುರಕ್ಕೆ ಹೋಗುವಾಗ ಆರೋಪಿತರು ನಮ್ಮ ಹಿಂಭಾಲಿಸಿಕೊಂಡು ಬಂದು ಆಟೋದಿಂದ ನಮ್ಮನ್ನು ಇಳಿಸಿ

ಚಾಸಾ 2 ರವರಿಗೆ ಆರೋಪಿ 1 ಮತ್ತು 3 ಕಲ್ಲಿನಿಂದ ಹೊಡೆದರು. ಚೇತನ್ ರವರು ನನ್ನ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದರು. ಆರೋಪಿ 2 ಮತ್ತು 4 ಚಾಸಾ 3 ರವರಿಗೆ ಹೊಡೆದರು. ನಮ್ಮ ಊರಿನವರಾದ ಚಾಸಾ 4 ಮತ್ತು 5 ಹಿಂದೆ ಆಟೋದಲ್ಲಿ ಬರುತ್ತಿದ್ದು ತಮ್ಮ ಆಟೋ ನಿಲ್ಲಿಸಿ ನಮನ್ನು ಬಿಡಿಸಿರುತ್ತಾರೆ. ಚಾಸಾ 4 ಮತ್ತು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಊರಿನಲ್ಲಿ ತೀರ್ಮಾನ ಮಾಡಿಕೊಳ್ಳೋಣ ಅಂತ ಸುಮ್ಮನಿದ್ದು ಆರೋಪಿತರು ಒಪ್ಪದ ಕಾರಣ ದಿಃ 07.02.2019 ರಂದು ಪೊಲೀಸು ದೂರು ನೀಡಿರುತ್ತೇನೆ. ನಾನು ದೂರು ನೀಡಿದ ನಂತರ ಪೊಲಿಸರು ಮಹಜರ್ ಗೆ ಬಂದಿದ್ದರು. ನೀಲಸೂಗೆ ಗ್ರಾಮದ ಬಸ್ ಸ್ಟಾಂಡ್ ಹತ್ತಿರ ನಾನು ತೋರಿಸಿದ ಜಾಗವನ್ನು ಪೊಲೀಸರು ಪಂಚನಾಮೆ ಮಾಡಿ ಬೆಳಗ್ಗೆ 10 ಗಂಟೆಗೆ ಚಾಸಾ 4 ಮತ್ತು 7 ಸ್ಥಳದಲ್ಲಿದ್ದು, ನಾನು ತೋರಿಸಿದ ಕಲ್ಲನ್ನು ಪೊಲೀಸರು ಅಮಾನತು ಪಡಿಸಿಕೊಂಡರು. ಘಟನೆ ಬಗ್ಗೆ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ದೂರನ್ನು ಅದನ್ನು ನಿಪಿ 1 ಎಂದು ಹಾಗೂ ಸಹಿಯನ್ನು 1 ಎ ಎಂದು, ಮಹಜರ್ ನ್ನು ನಿಪಿ 2 ಎಂದು, ಅದರಲ್ಲಿರುವ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಒಂದು ಕಲ್ಲು ಇದು ಅದನ್ನು ನಾನು ಗುರುತಿಸಿದ್ದು ಈಗ ಅದನ್ನು ಎಂ ಒ 1 ಎಂದು ಗುರುತಿಸಲಾಯಿತು.

ಸಾಕ್ಷಿದಾರರ ಹೇಳಿಕೆ ಸೀಲ್ಡ ಕವರ್ ನಲ್ಲಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಿ ಸಾಕ್ಷಿದಾರರ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು : ಶ್ರೀ.ಎಸ್ ಎಸ್ ಆರ್ ಆರೋಪಿ ಪರ ವಕೀಲರಿಂದ**

ನಿಪಿ 1 ರ ದೂರನ್ನು ಪೊಲೀಸರು ಬರೆದಿರುತ್ತಾರೆ. ದೂರಿನಲ್ಲಿ ಬರೆದಿರುವ ವಿಷಯವನ್ನು ಪೊಲೀಸರು ನನಗೆ ಓದಿ ಹೇಳಿರುತ್ತಾರೆ. ಘಟನೆ ನಡೆಯುವ ಸಮಯದಲ್ಲಿನಾನು ಕಿರುಗಾವಲಿನಲ್ಲಿ ಇದ್ದೆ ಎಂದರೆ ಸರಿಯಲ್ಲ. ದೂರು ಕೊಡುವ ಮೊದಲು ನಾವು ಮತ್ತು ಆರೋಪಿತರು ಅನ್ಯೋನ್ಯವಾಗಿ ಇರಲಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಯಾವುದೇ ಘಟನೆ ಆಗಿರುವುದಿಲ್ಲ ನಾನು ಆ ಸಮಯದಲ್ಲಿ ಕಿರುಗಾವಲಿನಲ್ಲಿದ್ದೆ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳಕ್ಕೆ ತಲಕಾಡಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ನರಸೀಪುರ ರಸ್ತೆ, ಉತ್ತರಕ್ಕೆ ನೀಲಸೋಗೆ ಗ್ರಾಮ, ದಕ್ಷಿಣಕ್ಕೆ ಬಸ್ ನಿಲ್ದಾಣ ಇದೆ. ಆರೋಪಿತರು ಆಟೋ ನಿಲ್ಲಿಸಿದಾಗ ಬೆಳಗ್ಗೆ 9.30 ರಿಂದ 10 ಗಂಟೆಯಾಗಿತ್ತು. ದೂರಿನಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದಿದ್ದರೂ ಆರೋಪಿತರ ವಿರುದ್ದ ಸುಳ್ಳು ದೂರು ನೀಡಿರುತ್ತೇನೆಂದರೆ ಸರಿಯಲ್ಲ. ಆರೋಪಿತರು ನನ್ನ ಮತ್ತು ನನ್ನ ಗಂಡ ಹಾಗೂ ತಂದೆಯ ವಿರುದ್ದ ಪೊಲೀಸು ದೂರು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹರ್

ಮಾಡಲು ಪೊಲೀಸರು ಬೆಳಗ್ಗೆ 10 ಗಂಟೆಗೆ ಬಂದಿದ್ದರು. ಮಹಜರ್ ಮಾಡಿದ ಸ್ಥಳದಲ್ಲಿ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಮ್ಮನ್ನು ಹಿಂಭಾಲಿಸಿಕೊಂಡು ಬಂದು ನಮ್ಮ ಆಟೋವನ್ನು ತಡೆದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ನನ್ನ ತಂದೆಗೆ ಎಂ ಒ 1 ರಿಂದ ಒಡೆದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಚೇತನ್ ರವರು ಸೀರೆ ಹಿಡಿದು ಎಳೆದು ಅವಮಾನಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಆರೋಪಿ 2 ಮತ್ತು 3 ನನ್ನ ಗಂಡನಿಗೆ ಮತ್ತು ತಂದೆಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಚಾಸಾ 4 ಮತ್ತು 5 ಹಿಂದಿನಿಂದ ಆಟೋದಲ್ಲಿ ಬರುತ್ತಿದ್ದು ನಮ್ಮ ಜಗಳ ನೋಡಿ ಬಿಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಜಗಳವನ್ನು ಊರಿನಲ್ಲಿ ಬಗ್ಗೆಹರಿಸಿಕೊಳ್ಳಬೇಕು ಅಂತ ಅದಕ್ಕೆ ಆರೋಪಿತರು ಒಪ್ಪದ ಕಾರಣ ನಾನು ಪೊಲೀಸು ದೂರು ನೀಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎಂ ಒ 1 ಆರೋಪಿತರು ಹೊಡದ ಕಲ್ಲು ಎಂದರೆ ಸರಿಯಲ್ಲ. ಎಂ ಒ 1 ಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**
**ತಿ.ನರಸೀಪುರ**